ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 98-103
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣ ಸಾಹಿತ್ಯದಲ್ಲಿ ವೈಚಾರಿಕ ನೆಲೆಯ ಹೊಸ ಸಾಧ್ಯತೆಗಳು

**ಶ್ವೇತಶ್ರೀ ಎನ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಲಲಿತ ಕಲಾ ಕಾಲೇಜು, ಮಾನಸ ಗಂಗೋತ್ರಿ, ಮೈಸೂರು.

**Abstract:**
*ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯದ ಘಟ್ಟ ಅಮೂಲ್ಯವಾದುದು. ಇದು ಹನ್ನೆರಡನೆಯ ಶತಮಾನದಲ್ಲಿ ನಡೆದ ಧಾರ್ಮಿಕ, ಸಾಮಾಜಿಕ ಮತ್ತು ವೈಚಾರಿಕ ಹಿನ್ನೆಲೆಯ ಚಳುವಳಿಯಾಗಿದೆ. ಈ ಚಳುವಳಿಯ ಮೂಲಾಧಾರವಾಗಿ ನಮಗೆ ವಚನ ಸಾಹಿತ್ಯ ಲಭ್ಯವಿದೆ. ಸಾಮಾಜಿಕ ನೀತಿ, ಜೀವನ ಮೌಲ್ಯ ವೈಚಾರಿಕತೆಯನ್ನು ಕ್ರಿಯಾತ್ಮಕ ನೆಲೆಯಲ್ಲಿ ಕಟ್ಟಿಕೊಡುವ ವಚನಗಳು ಸಮಾಜವಾದಿ ಆಶಯದ ಪ್ರತಿಬಿಂಬಗಳು. ವಚನ ಕ್ರಾಂತಿ ಕೇವಲ ಧಾರ್ಮಿಕ ನೆಲೆಗಷ್ಟೆ ಸೀಮಿತವಾಗದೇ ಅಂದಿನ ಸಮಾಜದ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಿತು ಎನ್ನುವುದು ಗಮನಾರ್ಹ ಸಂಗತಿ. ವರ್ಣ-ವರ್ಗ-ಲಿಂಗಭೇದಗಳನ್ನು ಹೋಗಲಾಡಿಸಿ ನವಸಮಾಜ ನಿರ್ಮಾಣಕ್ಕೆ ಶ್ರಮಿಸಿತು. ಅಲ್ಲದೆ ಕಾಯಕ, ದಾಸೋಹ, ಸಮಾನತೆ, ಭಾವಶುದ್ಧಿ ಮುಂತಾದ ವಿಶಿಷ್ಟ ಗುಣಗಳನ್ನು ವಚನ ಚಳುವಳಿ ಪ್ರತಿನಿಧಿಸಿತು.*

**Keywords:** *ಶರಣ ಸಾಹಿತ್ಯ, ವಚನ ಸಾಹಿತ್ಯ, ಕ್ರಾಂತಿಕಾರಿ ಚಳುವಳಿ, ಸಮಾಜವಾದಿ, ವೈಚಾರಿಕ ನೆಲೆ.*

## ಪೀಠಿಕೆ

***"ವೇದವೆಂಬುದು ಓದಿನ ಮಾತು***
***ಶಾಸ್ತ್ರವೆಂಬುದು ಸಂತೆಯ ಸುದ್ದಿ***
***ಪುರಾಣವೆಂಬುದು ಪುಂಡರಗೋಷ್ಠಿ***
***ತರ್ಕವೆಂಬುದು ತಗರನ ಹೋರಟೆ***
***ಭಕ್ತಿ ಎಂಬುದು ತೋರಿ ಉಂಬುವ ಲಾಭ***
***ಗುಹೇಶ್ವರನೆಂಬುದು ಮೀರಿದ ಘನವು"***

(ಅಲ್ಲಮ ಪ್ರಭು)

ಈ ಮೇಲ್ಕಂಡ ವಚನದಂತೆ ಮೌಢ್ಯಕ್ಕೆ ಬಲಿಯಾಗದೇ ವೈಚಾರಿಕತೆಯ ಕಡೆಗೆ ತಿರುಗಿ ಎಂದು ಸಮಾಜವನ್ನು ಶರಣರು ಎಚ್ಚರಿಸಿದರು. ಸಮಾಜವು ಮೌಢ್ಯವೆಂಬ ಕತ್ತಲೆಯಿಂದ ಕೂಡಿರುವಾಗ, ಹೊಸ ಚೈತನ್ಯದ ಶಕ್ತಿಯಾಗಿ ಸಮಾಜದ ಮೇಲೆ ಪ್ರಭಾವ ಬೀರಿದ್ದು ವಚನ ಚಳುವಳಿ. ಸಮಾಜದಲ್ಲಿ ಪ್ರಚಲಿತವಿದ್ದ ಅನೇಕ ವಿಧಿ ವಿಧಾನಗಳು, ಆಚರಣೆಗಳು ಸಾಮಾನ್ಯ ಜನತೆಯನ್ನು ಮೂಲೆಗುಂಪು ಮಾಡಿತ್ತು. ಪ್ರತಿಯೊಬ್ಬ ಸಾಮಾನ್ಯನೂ ಅರ್ಥೈಸುವ ಮೌಲ್ಯಗಳುಳ್ಳ ಹೊಸ ಸಾತ್ವಿಕ ಧರ್ಮ ರೂಪುಗೊಂಡಿತು. ಈ ಮೂಲಕ ಶರಣರು ಸಮಾಜವನ್ನು ಒಂದೆಡೆ ಬೆಸೆಯುವ ಸಾಮಾಜಿಕ, ಧಾರ್ಮಿಕ ಮೌಲ್ಯಗಳನ್ನು ಕೊಡುಗೆಯಾಗಿ ನೀಡಿದರು. ಇದರ ಫಲವಾಗಿ ದಲಿತರು, ಶೋಷಿತರು, ಕೆಳವರ್ಗದವರು, ಸ್ತ್ರೀಯರೂ ಸಹ ಸಾಮಾಜಿಕ ಸಮಾನತೆಯನ್ನು ಪಡೆದುದೂ ಸಾಮಾನ್ಯ ಜನವರ್ಗಕ್ಕೆ ಲಭಿಸಿದ ಜಯ ಎಂದೇ ಭಾವಿಸಬಹುದು.

ವಚನ ಚಳುವಳಿ ಪ್ರಾಚೀನ ವೈದಿಕ ಸಂಸ್ಕೃತಿಯಲ್ಲಿ ಅಡಕವಾಗಿದ್ದ ಶೋಷಣೆ, ಮೂಢನಂಬಿಕೆ, ಜಾತಿ

**Please cite this article as:** ಶ್ವೇತಶ್ರೀ ಎನ್. (2024). ಶರಣ ಸಾಹಿತ್ಯದಲ್ಲಿ ವೈಚಾರಿಕ ನೆಲೆಯ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 98–103

ವ್ಯವಸ್ಥೆಯ ವಿರುದ್ಧವಾಗಿತ್ತು. ಪ್ರಸ್ತುತ ಸಮಾಜದಲ್ಲಿ ಇವು ಇಂದಿಗೂ ಸಾಮಾಜಿಕ ತೊಡಕುಗಳಾಗಿಯೇ ಮುಂದುವರೆದಿವೆ. ಹೀಗೆ ಸಾಮಾಜಿಕ ಅಶಾಂತಿಯನ್ನು ಹೋಗಲಾಡಿಸಲು ವಚನಕಾರರು ಸೂಚಿಸಿರುವ ವೈಜ್ಞಾನಿಕ, ವೈಚಾರಿಕ ನಿಲುವು ಮತ್ತು ವಾಸ್ತವತೆಯ ಅರಿವನ್ನು ವಚನಗಳ ಮೂಲಕ ತಿಳಿಯಬಹುದು.

*"Religious leaders should make every effort to have religion to keep step with advances in Scientific and moral understanding."*[1] – ಜೋಸೆ

ಸಮಾಜದ ಅಂಧಶ್ರದ್ಧೆಯ ವಿರುದ್ಧ ಕಟುವಾದ ವಿಮರ್ಶೆಯೊಂದಿಗೆ, ಕೆಲವು ವೇಳೆ ವಿಡಂಬನೆ ವೈಜ್ಞಾನಿಕ, ವೈಚಾರಿಕ ವಿಚಾರಗಳು ಮೂಡಿವೆ ಎಂದು ಹೇಳಬಹುದು. ಯಾವ ಯಾವ ಜಡ್ಡುಗಟ್ಟಿದ ಕಾಲಗಳಲ್ಲಿ ಸೂಕ್ಷ್ಮಸಂವೇದನೆ ಉಳ್ಳವರೂ, ವಿಚಾರವಂತರೂ, ಆದ ಕೆಲವೇ ಜನ ತಮ್ಮ ಸುತ್ತಣ ಪರಿಸ್ಥಿತಿಯನ್ನು ಮತ್ತು ಅದನ್ನು ನಿಯಂತ್ರಿಸಿಕೊಂಡು ಬಂದ ರೂಢಿಗತವಾದ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನು ಪ್ರಶ್ನಿಸಲು ತೊಡಗುತ್ತಾರೋ, ಪ್ರತಿಭಟಿಸಲು ತೊಡಗುತ್ತಾರೋ ಅಂತಹ ಕಾಲಗಳನ್ನು 'ಸಂಕ್ರಮಣ ಕಾಲ'ಗಳೆಂದು ಕರೆಯಬಹುದು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಇಂತಹ ಸಂಕ್ರಮಣ ಕಾಲ. ಈ ಸಂಕ್ರಮಣದ ಮುಖ್ಯ ಪ್ರೇರಣೆ ವೀರಶೈವ ಧರ್ಮ; ಅದರ ಪರಿಣಾಮ ಒಂದು ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ವೈಚಾರಿಕ ವಿಚಾರ ಕ್ರಾಂತಿಯಾಗಿದೆ.

ವಚನಕಾರರನ್ನು ಶರಣರೆಂದು ಕರೆದು ಅವರ ಛಲ, ಸ್ವಭಾವ, ರೀತಿ–ನೀತಿ, ವ್ಯಕ್ತಿತ್ವವನ್ನು ರೂಪಿಸಲಾಗಿದೆ. ಶರಣರು ನಿಷ್ಕಾಮಿಗಳು, ನಿಬೋಧಕರು, ನಿರ್ದೇಹಿಗಳು, ಅನಿಮಿಷರು, ನೀತಿವಂತರು,ಉಪಮಾತೀತರು, ಕಾಲಕರ್ಮರಹಿತರು, ನಿರಾಕರರು, ಕಾರ್ಯನಿಷ್ಠರು, ನಿಃಶಂಕರು, ಮಹಾಮಹಿಮರು, ನಿರ್ಭೀತರು, ಛಲವಂತರು, ಹಿರಿದು–ಕಿರಿದೆಂಬ ಭೇದವಿಲ್ಲದವರು, ಸರ್ವಸ್ವಾತಂತ್ರ್ಯ, ಸಮಾನತೆ, ಬಂಧುತ್ವ ಭಾವವುಳ್ಳವರು, ನ್ಯಾಯನಿಷ್ಠುರು. ಹೀಗೆ ಬಹುವಿಧ ವ್ಯಕ್ತಿತ್ವವುಳ್ಳವರು ಎಂದು ಶರಣಪ್ರಭೆ ಕಾದಂಬರಿಯ ಮುಖಾಂತರ ಸ್ವಾಮಿ ಬಿ.ಎಸ್. ಅವರು ಶರಣರ ವೈಚಾರಿಕ ವ್ಯಕ್ತಿತ್ವವನ್ನು ಗುರುತಿಸಿದ್ದಾರೆ.

ವಚನಕ್ರಾಂತಿಯ ಬಗ್ಗೆ ತಿಳಿಸುತ್ತಾ ಈ ಕ್ರಾಂತಿಯಲ್ಲಿ ರಭಸ, ಆವೇಶ, ಪ್ರತಿಪಕ್ಷಗಳ ದಮನ ಮನೋಭಾವ, ಸ್ವಮತ ಪ್ರತಿಷ್ಠೆ, ಅನ್ಯಮತ ವಿಡಂಬನೆ ಇತ್ಯಾದಿಗಳು ಇರುವುದು ತೀರಾ ಸಹಜ. ಆದರೆ ಈ ಕ್ರಾಂತಿಗೆ ಅತ್ಯಂತ ಅಗತ್ಯವಾದ ವಿಚಾರ ಮೂಲವಾದ ವಿಮರ್ಶೆ ಪ್ರಜ್ಞೆಯೊಂದು ವಿಶೇಷ ಪ್ರಮಾಣದಲ್ಲಿ ಹಿನ್ನೆಲೆಯಾಗಿತ್ತೆಂಬ ಅಂಶವನ್ನು ಇಂದು ನಾವು ಮರೆಯಬಾರದು.

ಮುಂದುವರೆದು ದೇವರೆಂದರೆ ವಚನಕಾರರ ಪ್ರಕಾರ, ಪುರಾಣೋಕ್ತವಾದ ವರ್ಣರಂಜಿತವಾದ ಮೂರ್ತಿ ಅಲ್ಲ; ಅವರ ಪ್ರಕಾರ ಅದೊಂದು, ನಿರಾಕಾರಕ್ಕೆ ಸಮೀಪವಾದ ಸಂಕೇತ, ಅದನ್ನೇ ಲಿಂಗವೆಂದು ಕರೆದರು. ಅದನ್ನು ವ್ಯಕ್ತಿ ಶರೀರದ ಮೇಲೆ ಧರಿಸಬೇಕು ಎಂದರು. ಲಿಂಗದ ಮೇಲೆ ಇರುವಂಥ ಈ ಲಿಂಗವೇ ದೇವರ ಸಾಂಕೇತಿಕ ರೂಪ ಎಂದು ಹೇಳುವುದರ ಮೂಲಕ ಭಕ್ತನಿಗೆ ಬಹಿರಂಗಕ್ಕೆ ದೇವಸ್ಥಾನಕ್ಕೆ ಹೋಗಬೇಕಾದ ಅಗತ್ಯವಿಲ್ಲದಂತೆ ಮಾಡಿದರು. ಈ ಲಿಂಗ ಇರುವ ಸ್ಥಳವೇ ದೇವಾಲಯ. ಅಂದರೆ ಭಕ್ತನಾದವನ 'ದೇಹವೇ ದೇಗುಲ' ಎಂಬ ವೈಚಾರಿಕ ಕಲ್ಪನೆಯನ್ನು ಕೊಟ್ಟರು.

***'ಕೊಲುವವನೆ ಮಾದಿಗ***<br>
***ಹೊಲಸು ತಿಂಬವನೆ ಹೊಲೆಯ***<br>
***ಸಕಲ ಜೀವಾತ್ಮರಿಗೆ ಲೇಸನೆ ಬಯಸುವ***<br>
***ಕೂಡಲ ಸಂಗನ ಶರಣರೇ ಕುಲಜರು'***

ಹೊಸ ಘೋಷಣೆ, ಹಿಂಸೆಯ ಹೊಲಸಿನ ಮನೋಭಾವ ಹಾಗೂ ನಡವಳಿಕೆಯಿಂದ ಒಬ್ಬ ಕೀಳಾಗುತ್ತಾನೆಯೇ ಹೊರತು ಅವನ ಹುಟ್ಟಿನಿಂದ

ಅಲ್ಲ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಉದಾರತೆ ಹಾಗೂ ಉದಾತ್ತ ನಡವಳಿಕೆಯುಳ್ಳವನೇ ನಿಜವಾದ 'ಕುಲಜ'ನು ಎಂದು ಹೇಳಿರುವರು. ಈ ಹೊಸ ವಿಚಾರ, ಪರಂಪರಾಗತವಾದ ಜಾತಿಯ ಕಲ್ಪನೆಯನ್ನು ವಿರೋಧಿಸುತ್ತದೆ.

ಒಮ್ಮೆ ಹೊಲದಲ್ಲಿ ಉಳುವಾಗ ಎತ್ತುಗಳಿಗೆ ಹೊಡೆಯುತ್ತಿದ್ದರು. ಅದನ್ನು ಗಮನಿಸಿದ ಹೊಲೇರ ಭರಮ 'ಅಪ್ಪಾರ ದಿನಾಲೂ ಮೂಕ ಪ್ರಾಣಿಗೆ ಎಷ್ಟು ಹೊಡೆತೀರಿ? ಬಿಸಿಲ ಬ್ಯಾಗೆ, ಬೇರೆ. ಅವುಗಳ ಬಗ್ಗೆ ಕನಿಕರ ಇರಬೇಕ್ರಪ್ಪಾ ಅದೇ ಮನುಷ್ಯರಿಗೆ ಬಿದ್ರೆ, ಹ್ಯಾಗೆ ನೋಡಿ' ಎಂದಾಗ, ವೀರಯ್ಯ, "ಭರಮಣ್ಣಾ ನೀನು ದಡ್ಡನಲ್ಲ, ದೊಡ್ಡವರು ಅನ್ನಿಸಿಕೊಂಡ ನಾವು ನೀನು ಹೊಲೆಯನಲ್ಲ, ಮೂಕ ಪ್ರಾಣಿ ಹಿಂಸೆ, ಮಾಡೋ ನಾವು ಹೊಲೆಯರು" ಎಂದನು. 'ಮಾನವತೆಯೇ ನಿಜವಾದ ಧರ್ಮ' ಎಂದು ಹೇಳಬಹುದು.

ವಚನಕಾರರು ಸಂಕ್ರಮಣ ಕಾಲದ ಸಮಾಜದಲ್ಲಿನ ಮೇಲು-ಕೀಳುಗಳನ್ನು ಉಗ್ರವಾಗಿ ಖಂಡಿಸಿದರು. ಸಮಾನತೆಯು ಪ್ರತಿಪಾದಿಸಲು ಹೋರಾಡಿದರು. ಅದರೊಂದಿಗೆ 'ಕಾಯಕವೇ ಕೈಲಾಸ' ಇದು ಸಮಾಜದಲ್ಲಿ ಸಮಾನತೆಯ ತತ್ವದೊಂದಿಗೆ ಕೂತು ಉಣ್ಣದೇ ಬೆವರು ಸುರಿಸಿ ದುಡಿಯುವುದನ್ನು ಪ್ರತಿಪಾದಿಸಿದರು. ದುಡಿದೇ ಬದುಕಬೇಕು ಎಂದರು. ಹೀಗೆ ವಚನಗಳನ್ನು ಸಂವಿಧಾನದ ಆಶಯವಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಭಾವನೆ ಹಾಗೂ ಜಾತ್ಯಾತೀತ ಧರ್ಮಾತೀತ, ಸಮಾಜವಾದಿ ಮನೋಧರ್ಮದ ಹಿನ್ನೆಲೆಯಲ್ಲಿ ಅಧ್ಯಯನ ನಡೆಬಹುದಾಗಿದೆ.

> ***"ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತ.***
> ***ಕೊಂದಹರೆಂಬುದನರಿಯದೆ ಬೆಂದ ಒಡ ಹೊರೆವುತ್ತಲದೆ***
> ***ಕೊಂದವರುಳಿವರೆ ಕೂಡಲ ಸಂಗಮದೇವಾ"***

ಈ ವಚನದ ಮೂಲಕ ಪ್ರಾಣಿಬಲಿ ಇತ್ತೆಂಬುದರ ಸೂಚನೆಯಿದೆ. ಹಬ್ಬದ ಸಂದರ್ಭದಲ್ಲಿ ನಡೆಯುವ ಬಲಿ ಆಚರಣೆಗೆ ಒಳಪಡುವ ಏನು ತಿಳಿಯದ ಮುಗ್ಧ ಪ್ರಾಣಿಯನ್ನು ನೋಡಿ ಬಸವಣ್ಣ ಅನುಕಂಪ ವ್ಯಕ್ತಪಡಿಸುತ್ತಾರೆ. ತನ್ನ ತೃಪ್ತಿಗೆಂದು ಬಲಿಕೊಡುವವರನ್ನು ಖಂಡಿಸುತ್ತಾ, ಕೊಂದವರುಳಿವರೆ ಎಂದು ಆಕ್ರೋಶಭರಿತರಾಗುತ್ತಾರೆ. ಮನುಷ್ಯನ ಈ ರೀತಿಯ ಕ್ರೂರ ವರ್ತನೆ ಆತನಿಗೆ ಮಾರಕವೇ ಎಂದು ಹೇಳುವರು.

ನಾಲ್ವತ್ವಾಡದಲ್ಲಿ ಮಾರಿಬೇನೆ (ಕಾಲರಾ) ಬಂದು ಹಲವರು ಸಾಯುವರು. ಊರ ಜನರು ಆಲೋಚನೆ ಮಾಡಿ ಮಾರಿದೇವಿಗೆ ಕುರಿ, ಕೋಣ ಬಲಿಕೊಟ್ಟರೆ ಸರಿ ಹೋಗುತ್ತದೆ ಎಂದು ಊರವರೆಲ್ಲ ಸಭೆ ಸೇರಿ ತೀರ್ಮಾನ ಕೈಗೊಳ್ಳುವರು. ಗೌಡರಲ್ಲಿ "ನೀವು ಜಾತ್ರೆ ಮಾಡಿರಿ ವೈಭವದಿಂದ ಆದರೆ ಕೋಣನ ಬಲಿಬೇಡ ಪ್ರಾಣಿ ಹಿಂಸೆ ಸಲ್ಲದು, ಎಲ್ಲ ಜೀವರಾಶಿಗಳನ್ನು ನಿನ್ನಂತೆ ಕಾಣಬೇಕು"[4] ಎಂದು ಹೇಳುವರು.

12ನೇ ಶತಮಾನದಲ್ಲಯೇ ಪ್ರಾಣಿಬಲಿ, ನರಬಲಿಗಳು ನಿಷೇಧಕ್ಕೆ ಒಳಪಟ್ಟಿದ್ದವು. ಈ ಹಿನ್ನೆಲೆಯಲ್ಲಿ ವಚನಗಳನ್ನು ಕರ್ನಾಟಕ ಸರ್ಕಾರ ಹೊರಡಿಸಿರುವ ಮೌಢ್ಯ ನಿಷೇಧ ಕಾಯ್ದೆ 2020ರ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು.

ಸ್ತ್ರೀಯರು ತಪಸ್ಸಿಗೆ ವಿಘ್ನಕಾರಿಯಲ್ಲ ಮತ್ತು ಅವರಿಗೆ ಆಧ್ಯಾತ್ಮಿಕ ಸಾಧನೆಯಲ್ಲಿ ಗುರಿ ತಲುಪುವುದಷ್ಟೇ ಸ್ವಾತಂತ್ರ್ಯವಿದೆ ಎನ್ನುವುದು ವೈದಿಕ, ಜೈನ, ಬೌದ್ಧ ಮತಗಳು ಸ್ತ್ರೀಯರು ಪುರುಷರಷ್ಟೆ ಸಮಾನರು ಎಂದು ಒಪ್ಪುವುದಿಲ್ಲ.

ವೈದಿಕ ಧರ್ಮದ ಪ್ರಕಾರ ಮೊದಲು ಸ್ತ್ರೀಯರಿಗೆ ಪ್ರವೇಶವನ್ನು ನಿರಾಕರಿಸಿತು. ಜೈನ ಧರ್ಮದ ಪ್ರಕಾರ ಸ್ತ್ರೀಮೋಕ್ಷಕ್ಕೆ ಅರ್ಹಳಲ್ಲ. ಒಂದು ವೇಳೆ ಮೋಕ್ಷವನ್ನು ಪಡೆಯಬೇಕಾದರೆ ಆಕೆ ಮುಂದಿನ ಭವಗಳಲ್ಲಿ ಗಂಡಾಗಿ ಹುಟ್ಟಬೇಕು. ಸ್ತ್ರೀಯರನ್ನು ಕುರಿತು ವಿಚಾರ ಹೀಗಿರುವಾಗ ವಚನಕಾರರು ಹೆಣ್ಣು, ಗಂಡು ಎಂಬ ವರ್ಗ ಸಂಘರ್ಷದ ವಿರುದ್ಧವಾಗಿ,

***"ಮೊಲೆ ಮೂಡಿ ಬಂದರೆ ಹೆಣ್ಣೆಂಬರು***
***ಗಡ್ಡ ಮೀಸೆ ಬಂದರೆ ಗಂಡೆಂಬರು***
***ನಡುವೆ ಸುಳಿವಾತ್ಮನು ಗಂಡೂ ಅಲ್ಲ***
***ಹೆಣ್ಣು ಅಲ್ಲ; ಕಾಣಾ ರಾಮನಾಥ"***

ಇದು ಜೇಡರ ದಾಸಿಮಯ್ಯನ ತಾರ್ಕಿಕವಾಗಿದೆ.

ಹೆಣ್ಣು ಎಂದರೆ ಮಾಯೆ, ಮೋಹ ಇತ್ಯಾದಿ ಅಪಸ್ವರಗಳು ಪಾರಂಪಾರಿಕವಾಗಿ ಬಂದವುಗಳು, ಮಾಯೆ ಎಂದರೆ ಹೆಣ್ಣು ಎಂಬುದು ಅಸಂಬದ್ಧವಾಗಿದೆ.

***ಅಲ್ಲಮರು, 'ಹೆಣ್ಣು ಮಾಯೆಯೆಂಬುದು ಹೆಣ್ಣು ಮಾಯೆ ಅಲ್ಲ***
***ಮಣ್ಣು ಮಾಯೆ ಎಂಬರು, ಮಣ್ಣು ಮಾಯೆ ಅಲ್ಲ***
***ಹೊನ್ನು ಮಾಯೆ ಎಂಬರು, ಹೊನ್ನು ಮಾಯೆ ಅಲ್ಲ***
***ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ!'***

ಹಿಂದಿನ ಎಲ್ಲಾ ಧರ್ಮಗಳು ಹೆಣ್ಣನ್ನು ಮುಖ್ಯವಾಗಿ ಹೇಳುತ್ತಾ ಬಂದಿವೆ. ಆದರೆ ಗಂಡಿಗೆ ಹೆಣ್ಣು ಮಾಯೆ ಆಗುವುದಾದರೆ ಹೆಣ್ಣಿಗೂ ಗಂಡೂ ಯಾಕೆ ಮಾಯೆ ಅಲ್ಲ? ಎಂದು ದಿಟ್ಟತನದಿಂದ ಹೇಳಿದವಳು ಅಕ್ಕಮಹಾದೇವಿ,

***ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ***
***ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ***

ಇಲ್ಲಿ ಪ್ರತಿಭಟನೆಯ ಧ್ವನಿ ಕೇಳದಿದ್ದರೂ ಸಹ ವಿಚಾರ ಮಾತ್ರ ಸ್ಫುಟವಾಗಿದೆ. ಉಪನಿಷತ್ ಕಾಲದಲ್ಲಿದ್ದು, ಅನಂತರ ಕಳೆದುಕೊಂಡ ಸ್ಥಾನಮಾನಗಳನ್ನು ಮತ್ತೆ ಸ್ತ್ರೀಯರಿಗೆ ದೊರಕಿಸಿಕೊಟ್ಟದ್ದು, ವಚನಕಾರರ ಹೆಗ್ಗಳಿಕೆಯಾಗಿದೆ. ವಚನಕಾರರಿಂದಾಗಿ ಸ್ತ್ರೀಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿತು. ಸರಿಸಮಾನವಾಗಿ ಗೋಷ್ಠಿಗಳಲ್ಲಿ ಕಾಲಾನು ವಿಚಾರ ವಿನಿಮಯ ಮಾಡುವ ಸಮಾನತೆ ಲಭಿಸಿತು.

ಹೀಗೆ ಸ್ತ್ರೀಗಿದ್ದ ವರ್ಗ ಸಂಘರ್ಷ ಅಸಮಾನತೆಯನ್ನು ವಚನಕ್ರಾಂತಿಯ ಕಾಲದಲ್ಲಿ ತೊಡೆಯಲಾಯಿತು ಎಂದು ಹೇಳಬಹುದು.

ಈ ನಿಟ್ಟಿನಲ್ಲಿ ಪ್ರಸ್ತುತ ಸಮಾಜದಲ್ಲಿರುವ ಸ್ತ್ರೀ–ಪುರುಷ ಅಸಮಾನತೆಯ ಕುರಿತು ವೇಶ್ಯಾವೃತ್ತಿ, ಹೆಣ್ಣು ಭ್ರೂಣ ಹತ್ತಯೆ, ಲೈಂಗಿಕ ವಿಕೃತಿ, ದೇವದಾಸಿ ಪದ್ಧತಿ, ಅಂಧಾಚರಣೆ, ಶೋಷಣೆ, ದೌರ್ಜನ್ಯಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಬಹುದಾಗಿದೆ.

ಪುರಾಣಗಳಲ್ಲಿಂದರೂ ಭಾರತೀಯ ಆಚರಣೆಯಲ್ಲಿ ನಾನಾ ಬಗೆಯ ಯಜ್ಞಗಳ ವಿವರಗಳನ್ನು ಒಳಗೊಂಡ ವೇದಗಳು, ಯಜ್ಞ ಕಾರ್ಯಕ್ಕೆ ಬಳಸುವ ಪೂಜಾ ಪರಿಕರಗಳನ್ನು ಹೇಳಿವೆ. ಮಹರ್ಷಿ ಕಾತ್ಯಾಯನರು ತಮ್ಮ ಧರ್ಮಸೂತ್ರದಲ್ಲಿ ಯಜ್ಞದಲ್ಲಿ ಬಳಕೆಗೊಳ್ಳುತ್ತಿದ್ದ ಪ್ರಮುಖ ದ್ರವ್ಯಗಳಾವುವು ಎಂಬುದನ್ನು ಹೇಳಿದ್ದಾರೆ.

***'ತೈಲಂ ದಧಿ ಪಯ: ಸೋಮೋ ಯವಾಗೂ ರೋದನಂ ಘೃತಮ್।***
***ತಂಡಲಾ: ಫಲಮಾಪಶ್ಚದಶ ದ್ರವ್ಯಾಸ್ಯಾಕಾಮತಃ'॥***

ಅಂದರೆ ತೈಲ, ಮೊಸರು, ಹಾಲು, ಸೋಮಲತೆ, ಗಂಜಿ, ಅನ್ನ, ತುಪ್ಪ, ಅಕ್ಕಿ, ಫಲ ಹಾಗೂ ಜಲ ಈ ಹತ್ತು ದ್ರವ್ಯಗಳನ್ನು ದೇವರ ಪ್ರೀತ್ಯಾರ್ಥವಾಗಿ ಯಜ್ಞಗಳಲ್ಲಿ ತ್ಯಾಗ ಮಾಡಬೇಕು. ಈ ಮುಖ್ಯ ವಸ್ತುಗಳು ಪೂಜೆಗೆಂದು ಬಳಕೆಗೊಳ್ಳುತ್ತಿದ್ದವು. ಮಾಂಸ ಮತ್ತು ಸೋಮರಸವನ್ನು ಆಹುತಿಯಾಗಿ ಕೊಡಲಾಗುತ್ತಿತ್ತು. ಜೈನಧರ್ಮವೂ ಈ ಪೂಜಾ ಪದ್ಧತಿಗಳಿಂದ ಹೊರತಾಗಿರಲಿಲ್ಲ. ಪಂಚಾಮೃತಾಭಿಷೇಕ, ಷೋಡಶೋಪಚಾರ, ಅಷ್ಟವಿದಾರ್ಚನೆ ಎಂಬ ಪೂಜಾಪದ್ಧತಿಯನ್ನು ಒಳಗೊಂಡಿತ್ತು. ಉದಾಹರಣೆಗೆ ಶ್ರವಣಬೆಳಗೊಳದಲ್ಲಿ ಬಾಹುಬಲಿ ವಿಗ್ರಹಕ್ಕೆ ನಡೆಯುವ ಮಸ್ತಕಾಭಿಷೇಕ.

ಹೀಗೊಮ್ಮೆ ಶ್ರೀಮಂತನೊಬ್ಬ ಲಿಂಗಕ್ಕೆ ಹಾಲು, ಮೊಸರು, ತುಪ್ಪ ಮುಂತಾದವುಗಳನ್ನು ಅಭಿಷೇಕ ಮಾಡಲು ತಂದುಕೊಟ್ಟ, ಅರ್ಚಕ ಅದನ್ನು ಲಿಂಗಕ್ಕೆ ಸರಿಯುತ್ತಿದ್ದರು.

"ಶರಣರು ವ್ಯರ್ಥವಾಗಿ ಇದನ್ನೆಲ್ಲಾ ಲಿಂಗದ ಮೇಲೆ ಸುರಿದು ಹಾಳು ಮಾಡಬೇಡಿ. ಸಕಲ

ಜೀವಿಗಳ ಆಹಾರವಿದು. ಅನ್ನವೇ ಪರಬ್ರಹ್ಮ"[6] ಎಂದರು. ಶರಣರು ಡಾಂಭಿಕತೆಗೆ ಬೆಲೆ ಕೊಡದೇ ನಿರ್ಮಲವಾದ ನಿಜಭಕ್ತಿಗೆ ಪ್ರಾಶಸ್ತ್ಯ ನೀಡಿದರು.

ಈ ನಿಟ್ಟಿನಲ್ಲಿ ಮೌಢ್ಯಾಚರಣೆಗಳಿಂದುಂಟಾದ ಆರ್ಥಿಕ, ಸಾಮಾಜಿಕ ನಷ್ಟವನ್ನು ತಡೆಯಲು ಜಾರಿಗೊಳಿಸಿದ ನಿಯಮಗಳಲ್ಲಿ ಕಾಯಕ, ದಾಸೋಹಗಳಿಗೆ ಹೆಚ್ಚು ಮಹತ್ವ ನೀಡಿದ್ದಾರೆ. ದೈಹಿಕ ಆಚರಣೆಗಳು, ಮಂತ್ರ ತಂತ್ರ ಸಿದ್ಧಿಗಳು ಯಜ್ಞ ಆಹುತಿಗಳು ಸಮಾಜದಲ್ಲಿ ಉಂಟು ಮಾಡಿದ ಆರ್ಥಿಕ ನಷ್ಟವನ್ನು ತಪ್ಪಿಸಲು ಅಗತ್ಯವಾದ ವೈಚಾರಿಕ ಜ್ಞಾನವನ್ನು ಜನತೆಗೆ ಮನದಟ್ಟು ಮಾಡಿದರೆಂಬುದನ್ನು ಗುರುತಿಸಲಾಗಿದೆ.

ಹೀಗೆ ವಚನಗಳ ಹಿನ್ನೆಲೆಯಲ್ಲಿ ಉತ್ಪಾದನೆ ಮತ್ತು ಹಂಚಿಕೆ, ಬಡತನ, ಆಹಾರ ವ್ಯರ್ಥವಾಗುವುದು, ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಭ್ರಷ್ಟಾಚಾರದಿಂದ ವ್ಯಕ್ತಿಗತ ಸಂಪತ್ತಿನ ಶೇಖರಣೆ ಈ ನಿಟ್ಟಿನಲ್ಲಿ ಆರ್ಥಿಕ ಮತ್ತು ಸಾಮಾಜಿಕವಾಗಿ ಅಧ್ಯಯನ ಕೈಗೊಳ್ಳಬಹುದಾಗಿದೆ.

ಆತ್ಮೋದ್ಧಾರಕ್ಕಿಂತ ಲೋಕೋದ್ಧಾರಕ್ಕೆ ಹೆಚ್ಚಿನ ಮಹತವವಿತ್ತವರು. ಪ್ರತಿಯೊಬ್ಬ ಮಾನವ ಪ್ರಯತ್ನದಿಂದ ಶರಣನಾಗಬಲ್ಲನೆಂಬುದು ಅವರ ದೃಢ ನಂಬಿಕೆ, ಅವರು ಮಾನವರಂತೆ ಕಂಡರೂ ಅಸಾಮಾನ್ಯರೂ, ಎಲ್ಲ ಮಧ್ಯದಲ್ಲಿದ್ದು, ಸಾಂಸಾರಿಕ ಜೀವನ ಸಾಗಿಸುತ್ತ ಕಾಯಕ, ದಾಸೋಹಗಳಲ್ಲಿ ತೊಡಗಿ, ಶಿವಪೂಜೆ – ಸಮಾಜ ಸೇವೆಯೆಂದು ಬಗೆದು, ಧರ್ಮವನ್ನು ಸರಳೀಕರಿಸಿ, ಸಾಮಾಜೀಕರಣ ಮಾಡಿದವರು. ಮಾನವೀಯ ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಬಂದವರು. ಸಂಕೀರ್ಣದತ್ತ, ಜಟಿಲದತ್ತ ಸಾಗಿದ ಜೀವನದ ಗತಿ–ಮತಿಗಳಿಗೆ ಬುದ್ಧಿ ಸಂಪರ್ಕದಿಂದ ದೂರ ಮಾಡಿ, ಹೃದಯ ಸಂಬಂಧ ಕಲ್ಪಿಸಿದವರು ಎಂದು ಶರಣಪ್ರಭೆ ಕಾದಂಬರಿಯ ಮೂಲಕ ಅವರಲ್ಲಿದ್ದ ವೈಚಾರಿಕ ಮನೋಭಾವವನ್ನು ತಿಳಿಯಬಹುದಾಗಿದೆ.

***"ಮರವೇಕೋ ಪರ್ವತವೇಕೋ***
***ಜನವೇಕೋ ನಿರ್ಜನವೇಕೋ***
***ಚಿತ್ತ ಸಮಾಧಾನ ಉಳ್ಳ ಶರಣಂಗೆ"*** [7]

ಇದು ವೈಚಾರಿಕತೆಯ ಪ್ರಶ್ನೆಯಾಗಿದ್ದು, ತಪಸ್ಸಿನ ಹೆಸರಿನಲ್ಲಿ ದೇಹದಂಡನೆ ಎಂಬುದು ಕೇವಲ ಹುತ್ತವನ್ನು ಬಡಿಯುವ ವ್ಯರ್ಥ ಪ್ರಯತ್ನ, ಒಳಗಿನ ವಿಷ ತುಂಬಿಕೊಂಡ ಹಾವು ಇದ್ದ ಹಾಗೇ ಇರುತ್ತದೆ. ಆದುದರಿಂದ ಇದ್ದಲ್ಲೇ ಇದ್ದು ಮನಸ್ಸನ್ನು ಹದಗೊಳಿಸುವುದೇ ನಿಜವಾದ ಸನ್ಯಾಸ, ಆಧ್ಯಾತ್ಮಿಕ ಸಾಧನೆ, ಇದಕ್ಕಾಗಿ ಸಂಸಾರವನ್ನಾಗಲಿ, ಗೃಹಸ್ಥ ಧರ್ಮವನ್ನಾಗಲಿ ಬಿಡಬೇಕಾಗಿಲ್ಲ ಎಂದು ಹೇಳುವರು. ಜೇಡರ ದಾಸಿಮಯ್ಯ 'ಸತಿ–ಪತಿಗಳೊಂದಾದ ಭಕ್ತಿ ಹಿತವಾಗುವುದು ಶಿವಂಗೆ' ಎಂದು ಹೇಳುತ್ತಾನೆ. ವಚನಕಾರರ ಪ್ರಕಾರ ಸನ್ಯಾಸವೆಂದರೆ ಸಂಸಾರಕ್ಕೆ ವಿರುದ್ಧವಾದುದಲ್ಲ ಮತ್ತು ಕಾಡಿಗೆ ಹೋಗಿ ದೇಹ ದಂಡನೆ ಮಾಡಿಕೊಳ್ಳುವುದು ಅಲ್ಲ. ಅದು ಒಂದು ಚಿತ್ತದ ಸಮಾಧಾನ ಸ್ಥಿತಿಯನ್ನು ಸಾಧಿಸುವ ವಿಧಾನ ಎಂದು ತಿಳಿಯಬಹುದಾಗಿದೆ.

***"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ ತರ್ಕದ ಬೆನ್ನ ಭರನೆತ್ತುವೆ, ಆಗಮದ ಮೂಗ ಕೊಯ್ಯುವೆ ನೋಡಯ್ಯ"***

***ಎಂದು ಬಸವಣ್ಣನವರು ಸವಾಲು ಹಾಕಿದರು.***

***"ವೇದ ಶಾಸ್ತ್ರ ಪುರಾಣಗಳೆಂಬ***
***ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿರೋ"*** [8]

ಎಂದು ಅಕ್ಕಮಹಾದೇವಿ, ಅವುಗಳ ನಿರರ್ಥಕತೆಯನ್ನು ಘೋಷಿಸಿದಳು. 'ವೇದವನೋದಿದರೇನು, ಶಾಸ್ತ್ರವ ಕೇಳಿದರೇನು' ಎಂಬುದೇ ಈ ವಚನಕಾರರ ಮುಖ್ಯ ಧೋರಣೆಯಾಯಿತು. ವೇದೋಕ್ತವಾದ ಹಿಂದೂ ಧರ್ಮ, ತನ್ನ ವರ್ಣ ವ್ಯವಸ್ಥೆಯಿಂದ ವ್ಯಕ್ತಿಗಳಲ್ಲಿ ಶ್ರೇಷ್ಠ ಕನಿಷ್ಠರೆಂಬ ತಾರತಮ್ಯವನ್ನು ಕಲ್ಪಿಸುತ್ತಾ, ಯಜ್ಞ ಯಾಗಾದಿಗಳಿಂದ ಪ್ರಾಣಿವಧೆಯನ್ನು ಸಮರ್ಥಿಸುತ್ತಾ 'ಸರ್ವ ಖಲ್ವಿದಂ ಬ್ರಹ್ಮ' ಎಂದು

ಉದ್ಘೋಷಿಸುವುದು ಎಷ್ಟು ವಿಲಕ್ಷಣ ಎಂದು ವಚನಕಾರರಿಗೆ ತೋರಿರಬಹುದು.

ಅಲ್ಲದೆ ವ್ಯಕ್ತಿಯ ಆಧ್ಯಾತ್ಮಕಾನುಭವ ಎನ್ನುವುದು ವೈಯಕ್ತಿಕ ಸಾಧನೆಯಿಂದ ಶ್ರದ್ಧೆ–ನಿಷ್ಠೆ–ಸ್ವಾರ್ಥ ಪರಿಶೀಲನೆಗಳಿಂದ ಲಭಿಸಿತಕ್ಕದ್ದೇ ಹೊರತು, ವೇದಶಾಸ್ತ್ರಗಳ ಪಠನದಿಂದ ಪರಂಪರಾಗತವಾದ ವಿಚಾರವನ್ನು ನಂಬಿಕೆಗಳನ್ನು ಒಪ್ಪಿಕೊಳ್ಳುವುದರಿಂದ ಬರುವುದಿಲ್ಲ ಎನ್ನುವುದನ್ನು ಇವರು ಕಂಡುಕೊಂಡರು. 'ಅನುಭವ ಅಥವಾ ಆಧ್ಯಾತ್ಮಿಕ ಅನುಭವ ಎನ್ನುವುದು 'ಅಂತರಂಗದ ರತ್ನ ಕಾಣಿರೋ' ಎಂದು ವಚನಕಾರರು ಈ ಅರ್ಥದಲ್ಲಿ ಹೇಳಿದ್ದಾರೆ.

ಒಟ್ಟಾರೆಯಾಗಿ ವಚನ ಸಾಹಿತ್ಯ ಸಮಗ್ರ ವಿಷಯಗಳ ಭಂಡಾರ. ಇದರಲ್ಲಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ವೈಚಾರಿಕ, ಆರ್ಥಿಕ ಹೀಗೆ ಹಲವು ಚಿಂತನೆಗಳಿವೆ. ಪ್ರತಿಯೊಂದು ಚಿಂತನೆಯು ವೈಚಾರಿಕ ಮೂಲವಾಗಿದೆ. ಇಲ್ಲಿನ ವೈಚಾರಿಕ ಚಿಂತನೆಗಳು ಆದರ್ಶಮಯವಾಗಿಯೂ ವ್ಯವಹಾರ ಯೋಗ್ಯವಾಗಿಯೂ ಇವೆ. ಸಮಾಜದ ಕ್ಷೋಭೆಗೆ ಕಾರಣವಾದ ಅನಗತ್ಯ ವಿಚಾರಗಳಿಂದ ದೂರವಿರುವಂತೆ ವೈಚಾರಿಕ ಜ್ಞಾನವನ್ನು ಜನತೆಗೆ ಶರಣರು ಮನದಟ್ಟು ಮಾಡಿದರೆಂದು ಗುರುತಿಸಬಹುದಾಗಿದೆ.

**ಕೊನೆಟಿಪ್ಪಣಿಗಳು :**

1. ತಿಪ್ಪೇರುದ್ರಸ್ವಾಮಿ. *ಶರಣರ ಅನುಭವ ಸಾಹಿತ್ಯ*, ಪುಟ.286
2. ಸ್ವಾಮಿ ಬಿ.ಎಸ್. *ಶರಣಪ್ರಭೆ,* ಪುಟ.21
3. ಬಸವರಾಜು ಎಲ್. *ಬಸವಣ್ಣನವರ ವಚನಗಳು.* ಪುಟ. 129
4. ಸ್ವಾಮಿ ಬಿ.ಎಸ್. *ಶರಣಪ್ರಭೆ.* ಪುಟ. 30
5. ಅಮರೇಶ ಯತಗಲ್ (ಸಂ.). *ಸಾರ್ಥಕ ಬದುಕು* (ಸಂಪುಟ 1) ಪುಟ. 531
6. ಸ್ವಾಮಿ ಬಿ.ಎಸ್. *ಪೂರ್ವೋಕ್ತ.* ಪುಟ.38
7. ಅಮರೇಶ ಯತಗಲ್ (ಸಂ.) *ಪೂರ್ವೋಕ್ತ.* (ಸಂಪುಟ 1) ಪುಟ.532
8. *ಅದೇ.* ಪುಟ. 531

**ಆಕರ ಗ್ರಂಥಗಳು**

- ಬಸವರಾಜು ಎಲ್. (1962). *ಬಸವಣ್ಣನವರ ವಚನ ಸಂಗ್ರಹ.* (ತೃತೀಯ ಮುದ್ರಣ). ಗೀತಾ ಬುಕ್ ಹೌಸ್.
- ಸ್ವಾಮಿ ಬಿ.ಎಸ್. (2007). *ಶರಣಪ್ರಭೆ.* ಕಿರಣ್ ಎಂಟರ್‌ಪ್ರೈಸಸ್.

**ಪರಾಮರ್ಶನ ಗ್ರಂಥಗಳು**

- ಬಸವರಾಜ ಕಲ್ಗುಡಿ. (1988). *ಮಧ್ಯಕಾಲೀನ ಭಕ್ತಿ ಮತ್ತು ಅನುಭವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ,* ಕನ್ನಡ ಸಾಹಿತ್ಯ ಪರಿಷತ್ತು.
- ಚಿದಾನಂದಮೂರ್ತಿ. (1995). *ವಚನ ಸಾಹಿತ್ಯ.* ಬೆಂಗಳೂರು ವಿಶ್ವವಿದ್ಯಾನಿಲಯ.
- ತಿಪ್ಪೇರುದ್ರಸ್ವಾಮಿ ಎಸ್. (1995). *ಬಸವೇಶ್ವರ ವಚನ ದೀಪಿಕೆ.* ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.